ಅ) ಹಾಗಿದ್ದಲ್ಲಿ, ಇಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭಿಸಲು ಆದೇಶ ಹೊರಡಿಸಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ, ಎಂದು ಆದೇಶ ಹೊರಡಿಸಲಾಗುವುದು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ತಾತ್ವಿಕವಾಗಿ ಅನುಮೋದಿಸಿದ್ದರು.

ಆ) ಸಧ್ಯಕ್ಕಿಲ್ಲ.

ಇ) ಉದ್ಭವಿಸುವುದಿಲ್ಲ.

14 ವರ್ಷ ವಯಸ್ಸಿನವರೆಗಿನ ಮಕ್ಕಳಿಗೆ ಉಚಿತ ಶಿಕ್ಷಣ

4647 - ಶ್ರೀ ಲಿಂಗಪ್ಪ ಸಿ.ಎಂ. (ರಾಮನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ 14 ವರ್ಷ ವಯಸ್ಸಿನವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಶಿಕ್ಷಣ ನೀಡಬೇಕೆಂದು ಸಂವಿಧಾನದ ನಿರ್ದೇಶನವಿರುವುದು ನಿಜವೇ?

ಆ) 14 ವರ್ಷ ವಯಸ್ಸಿನವರೆಗಿನ ಮಕ್ಕಳು ಓದುತ್ತಿರುವ ಕನ್ನಡ ಮಾಧ್ಯಮದ ಖಾಸಗಿ ಶಾಲೆಗಳಿಗೂ ಅನುದಾನ ಬಿಡುಗಡೆ ನೀಡಬೇಕೆಂದು ಸರ್ಕಾರದ ನೀತಿ ನಿಯಮದಲ್ಲಿದೆಯೇ?

ಇ) ಸರ್ಕಾರದ ಅನುಮತಿ ಪಡೆದು ಹತ್ತು ವರ್ಷಗಳಿಗಿಂತ ಹಿಂದಿನಿಂದಲೂ ಕನ್ನಡ ಶಿಕ್ಷಣ ಬೋಧನೆ ಮಾಡುತ್ತಿರುವ ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೂ ಅನುದಾನ ನೀಡಬೇಕೆಂದಿರುವುದು ಸಂವಿಧಾನ ಬದ್ಧತೆಯಲ್ಲಿದೆಯೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಇಲ್ಲ.

ಇ) ಇಲ್ಲ.

ಪ್ರಾಥಮಿಕ ಶಿಕ್ಷಣಕ್ಕೆ ಶಾಲಾ ಪಠ್ಯಕ್ರಮಗಳನ್ನು ರೂಪಿಸುವುದು

4648 - ಶ್ರೀ ಲಕ್ಷ್ಮಿನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಾಥಮಿಕ ಶಿಕ್ಷಣಕ್ಕೆ ಸೂಕ್ತವಾದಂಥ ಶಾಲಾ ಪಠ್ಯಪುಸ್ತಕಗಳನ್ನು ರೂಪಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?